ದಿನಾಂಕಃ 29.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ವಾದಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದ:</u>**

1. ನೀವು 6 ಗುಂಟೆ ಜಮೀನನ್ನು ವಾದಿಗೆ ಯಾವ ದಿನ ಬಿಟ್ಟುಕೊಟ್ಟಿದ್ದೀರ ಎಂದು ನನಗೆ ನೆನಪಿಲ್ಲ. ನಾನು ಯಾವ ವರ್ಷದಿಂದ ಒತ್ತುವರಿ ಮಾಡಿದ್ದೆ ಎಂದು ನನಗೆ ಗೊತ್ತಿಲ್ಲ.

2. ಅವರು ಅಮಲುಜಾರಿ ಅರ್ಜಿಯನ್ನು ಹಾಕಿ ನಿಮ್ಮಿಂದ 6 ಗುಂಟೆಯನ್ನು ಬಿಡಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ಪ್ರಕ್ರಿಯೆ ನ್ಯಾಯಾಲಯದ ಮೂಲಕ ಆಗಿದೆ ಎಂದರೆ ಸರಿ.

3. ನೀವು 26 ಗುಂಟೆಯನ್ನು ಬಿಟ್ಟುಕೊಟ್ಟಿದ್ದೀರ ಎಂದರೆ ಸರಿ. ಕೋರ್ಟ್ ಎಷ್ಟು ಜಮೀನನ್ನು ಬಿಟ್ಟುಕೊಡಲು ಆದೇಶ ಮಾಡಿತ್ತು, ಅಷ್ಟು ಬಿಟ್ಟುಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

4. ಸದರಿ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವಾದಿಯವರಿಗೆ ದಾವ ಜಮೀನಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

5. ದಾವ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ.

6. ದಾವ ಜಮೀನಿಗೆ ಸಂಬಂಧಪಟ್ಟಂತೆ ಆದೇಶವಾದರೆ ನಿಮಗೆ ತೊಂದರೆ ಇಲ್ಲ ಎಂದರೆ ಸರಿ. ಆದರೆ ಅದನ್ನು ಉಪಯೋಗಿಸಿಕೊಂಡು ರಾಜಕೀಯವಾಗಿ ನಮಗೆ ತೊಂದರೆ ಕೊಡುತ್ತಾರೆ ಎಂದು ನುಡಿಯುತ್ತಾರೆ.

7. ನಾನು ವಾದಿಯರ ಮೇಲೆ ತೊಂದರೆ ಕೊಟ್ಟಿರುವ ಬಗ್ಗೆ ದೂರು ನೀಡಿರುತ್ತೇನೆ. ಸದರಿ ಕೇಸು ನ್ಯಾಯಾಲಯದಲ್ಲಿ ವಿಚಾರಣೆಯಾಗಿದೆಯಾ ಎಂದರೆ? ಅದರ ಬಗ್ಗೆ ನನಗೆ ನೆನಪಿಲ್ಲ.

8. ವಾದಿಯವರ ಮೇಲೆ ದೂರು ನೀಡಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ? ನನಗೆ ನೆನಪಿಲ್ಲ.

9. ದಿ.04.02.2021 ರಂದು ನೀವು ವಾದಿಯವರ ಜಮೀನಿನ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದೀರ ಎಂದರೆ ಸರಿಯಲ್ಲ.

10. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.